# ಡೈರಿ ಬರೀತೀರಾ?

★ ಸಂಪಟೂರು ವಿಶ್ವನಾಥ್

ಡೈರಿ ಅಥವಾ ದಿನಚರಿ ಲ್ಯಾಟಿನ್ ಬಾಷೆಯ 'ಡೈಸ್' ಎಂದರೆ 'ದಿನ' ಎನ್ನುವ ಪದದಿಂದ ಬಂದದ್ದು. ದಿನದ ಅನುಭವ, ಚಟುವಟಿಕೆ, ಮನನ ಯೋಗ್ಯ ಅಂಶಗಳನ್ನು ಬರೆದಿಡುವುದೇ ಡೈರಿ. ವೈಯಕ್ತಿಕ ದಾಖಲೆಯಾದ್ದರಿಂದ ಅದಕ್ಕೆ ಇತಿಮಿತಿ, ನೀತಿ ನಿಬಂಧನೆಗಳ ಸಂಕೋಲೆಯಿಲ್ಲ.

ಪ್ರತಿ ವರ್ಷ ಗಣಪತಿ ಹಬ್ಬಕ್ಕೆ ಮುಂಚೆ ಗಣಪತಿ, ಗೌರಿ ಪ್ರತಿಮೆಗಳು, ರಕ್ಷಾ ಬಂಧನಕ್ಕೆ ಮುಂಚೆ ವಿವಿಧ ರಾಖಿಗಳು, ದೀಪಾವಳಿಗೆ ಮುಂಚೆ ಬಾಣ ಬಿರುಸುಗಳು, ನವರಾತ್ರಿಗೆ ಮುಂಚೆ ಬಣ್ಣದ ಬೊಂಬೆಗಳು, ಸಂಕ್ರಾಂತಿಗೆ ಮುಂಚೆ ಬಣ್ಣ ಬಣ್ಣದ ಸಕ್ಕರೆ ಅಚ್ಚುಗಳು, ಎಳ್ಳು ಪ್ಯಾಕೆಟ್‌ಗಳು ರಸ್ತೆಯ ಇಕ್ಕೆಲಗಳಲ್ಲಿ ಕಾಣಿಸಿಕೊಳ್ಳುವ ಹಾಗೆ, ಡಿಸೆಂಬರ್ ತಿಂಗಳಿನಲ್ಲಿ ಕ್ಯಾಲೆಂಡರುಗಳು, ಡೈರಿಗಳು ಕಾಣ ಸಿಕ್ಕುತ್ತವೆ.

ಸ್ಕೂಲು ಡೈರಿ, ಕೃಷಿಕರ ಡೈರಿ, ವೈದ್ಯರ ಡೈರಿ, ಇಂಜಿನಿಯರುಗಳ ಡೈರಿ, ವಕೀಲರ ಡೈರಿ, ಎಕ್ಸಿಕ್ಯುಟಿವ್ ಡೈರಿ, ಗೃಹಿಣಿಯರ ಪಂಚಾಂಗ ಸಹಿತ ಡೈರಿ ಪಾಕೆಟ್ ಡೈರಿ ಇತ್ಯಾದಿ ಆಕರ್ಷಕ ಡೈರಿಗಳು ಕಣ್ಣು ಕುಕ್ಕುತ್ತವೆ.

ಡೈರಿಗಳಲ್ಲಿ ಅಡಕವಾಗಿರುವ ವಿಷಯಗಳ ಪೈಕಿ ದಿನ, ವಾರ, ಮಾಸ, ರಾಹುಕಾಲ, ಗುಳಿಕಕಾಲ, ಮನನಯೋಗ್ಯ ಮಾಹಿತಿ, (ದೂರವಾಣಿ ಸಂಖ್ಯೆಗಳು, ಅಳತೆಗಳ ಮೂಲಮಾನ, ಭೂಪಟ, ಸ್ಥಳಗಳ ಕಾಲ ಮತ್ತು ದೂರ) ರಜಾ ದಿನಗಳು, ಯಾವ ಸಮಯದಲ್ಲಿ ಯಾವ ಕೆಲಸ ಮಾಡಬೇಕು, ಹಣಕಾಸು ಲೆಕ್ಕಾಚಾರ ಮುಂತಾದವೆಲ್ಲ ಇರುತ್ತವೆ. ಹೀಗಾಗಿ ಡೈರಿ, ಪ್ರತಿಯೊಬ್ಬರ ಅವಶ್ಯ ದಾಖಲೆಯ ಪುಸ್ತಕ.

ಇವು ಸಾಮಾನ್ಯರ ಉಪಯೋಗಕ್ಕೆ ಅಗತ್ಯವಾದ ವಿವರಗಳೇ ಆದರೂ, ಬದುಕಿನ ಯಾವುದೇ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದವರಿಗೆ ಡೈರಿ ಬರೆಯುವುದು, ಆತ್ಮ ವಿಮರ್ಶೆಯ, ಮುಂದಿನ ಪೀಳಿಗೆಗೆ ಮಾರ್ಗದರ್ಶನ ಮಾಡುವ, ಸತ್ಯಶೋಧನೆಯ, ವಸ್ತುನಿಷ್ಠ ವಿಷಯಗಳನ್ನು ನೆನಪು ಮಾಡಿಕೊಡುವ, ಸೃಜನಶೀಲತೆಯನ್ನು ಮೆರೆಯುವ ಉತ್ತಮ 'ಸಾಧನ' ಆಗಿರುತ್ತದೆ. ಇಂತಹ ವಿಶೇಷ ವ್ಯಕ್ತಿಗಳ ಬರವಣಿಗೆ ಮಾನವ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತದೆ.

ಗ್ರೀಕರ ಮತ್ತು ಭಾರತೀಯರ ಪುರಾತನ ಡೈರಿಗಳು ಗ್ರಹಗಳ ಸ್ಥಳ, ಚಲನವಲನ; ಋತುಗಳಲ್ಲಿ ಕಾಣಬರುವ ಬದಲಾವಣೆಗಳು, ಮುಂತಾದವನ್ನು ವಿವರಿಸುತ್ತಿದ್ದವು. ರೋಮನ್ನರ ಡೈರಿಗಳು (ಅನಲ್ಸ್) ವ್ಯಕ್ತಿಗೆ ಮಾತ್ರ ಸಂಬಂಧಿಸಿರದೆ ಸಂಸಾರದ ಖರ್ಚು ವೆಚ್ಚ, ಅತಿಥಿ ಅಭ್ಯಾಗತರ ಭೇಟಿ, ಸಾರ್ವಜನಿಕ ಖರ್ಚು ವೆಚ್ಚ, ನ್ಯಾಯಾಧೀಶರ ತೀರ್ಪುಗಳಿಗೆ, ಚಾರಿತ್ರಿಕ ಘಟನೆಗಳಿಗೆ ಸಂಬಂಧಿಸಿದ್ದವು.

ಕ್ರಿಸ್ತಶಕೆಯ ಆರಂಭದಿಂದ 'ಆಧುನಿಕ ಡೈರಿ ಯುಗ' ಆರಂಭವಾಯಿತೆಂದು ಹೇಳಬಹುದು. ದಿನ ನಿತ್ಯದ ಆಗು ಹೋಗುಗಳ ದಾಖಲೆ ಮತ್ತು ವೈಯಕ್ತಿಕ ಟೀಕೆ ಟಿಪ್ಪಣಿಗಳು ಸಾಮಾನ್ಯವಾಗಿ ಬರಹ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗೆ ಡೈರಿ ಬರೆಯುವವನನ್ನು 'ಡೈರಿಯಿಸ್ಟ್' ಎಂದು ಕರೆಯುತ್ತಾರೆ. ಇವರುಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನಮಾನ ದೊರೆಯುತ್ತದೆ. ಹೀಗಾಗಿ 'ಡೈರಿ' 'ಲೆಕ್ಕಾಚಾರದ ಪುಸ್ತಕ', ಎನ್ನುವ ಅಪವಾದದಿಂದ ದೂರವಾಯಿತು.



ಡಾಂಟೆ (1265–1321), ಪೆಟ್ರಾರ್ಕ್ (1304–1374)ರು ಬರೆದ ದಿನಚರಿಗಳಲ್ಲಿ ಅವರ ಪ್ರೇಮ ಪ್ರಸಂಗಗಳೂ ಸೇರಿ, ಡೈರಿಗೆ ಹೊಸ ಆಯಾಮ ಸಿಕ್ಕಿತು. ಇಂಗ್ಲೆಂಡಿನ ಸ್ಯಾಮ್ಯುಯಲ್ ಪೆಪಿಸ್ (1633–1703)ನ ಮೊದಲನೆಯ ಡೈರಿ (1660) ಇಂದಿಗೂ ಇಂಗ್ಲಿಷ್ ಸಾಹಿತ್ಯಾಭಿಷಿಗಳ ಪ್ರಕಾರ ಡೈರಿ ಸಾಹಿತ್ಯ ಪ್ರಕಾರದ ಮೇರು ಕೃತಿ. ವಿವಿಧ ಭಾಷೆಗಳಲ್ಲಿ, ಉತ್ತಮ ಡೈರಿ ಬರೆಯುತ್ತಿರುವ ನೂರಾರು ಸಾಹಿತಿಗಳು ರಾಜಕಾರಣಿಗಳು, ಚರಿತ್ರೆಕಾರರು, ವಿಜ್ಞಾನಿಗಳು ಇಂದಿಗೂ ಇದ್ದಾರೆ.

ನಮ್ಮ ದೇಶದಲ್ಲಿಯೂ ವಿವಿಧ ಕ್ಷೇತ್ರಗಳ ಸಾಧಕರು ಡೈರಿ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆಗಳನ್ನು ಕೊಡುತ್ತಿದ್ದಾರೆ.

ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಮಹದೇವ ದೇಸಾಯಿ, ಸಿ. ರಾಜಗೋಪಾಲಚಾರಿ, ಜಯಪ್ರಕಾಶ್ ನಾರಾಯಣ್, ಚಂದ್ರಶೇಖರ್ ಮತ್ತು ಪಿ.ವಿ. ನರಸಿಂಹರಾವ್‌ರ ಬರವಣಿಗೆಗಳು ನಮ್ಮ ದೇಶದ ರಾಜಕೀಯ, ಸಾಮಾಜಿಕ ಚರಿತ್ರೆಗೆ ಕನ್ನಡಿ ಹಿಡಿದಿವೆ. ಡೈರಿ ಬರೆಯುವುದರ ಮೂಲಕ ಜೈಲುವಾಸ, ಸಾಮಾಜಿಕ ಸಂಘರ್ಷ ಮತ್ತು ಸಾಹಿತ್ಯ ಚಳವಳಿಗಳನ್ನು ದಾಖಲಿಸಿದವರ ಪೈಕಿ ಪ್ರಮುಖರೆಂದರೆ ಲಕ್ಷ್ಮಿನಾಥ್ ಬೆಜ್‌ಬರೋವ, ದುರ್ಗಾರಾಂ ಮೆಹ್ತಾಜಿ, ಭೋಲಾನಾಥ್ ಸಾರಾಭಾಯಿ, ಗೋವರ್ಧನ್ ತ್ರಿಪಾಠಿ, ರಾಧಾಚರಣ್ ಗೋಸ್ವಾಮಿ, ಜಮ್ನಾಲಾಲ್ ಬಜಾಜ್, ಡಾ. ರಾಜೇಂದ್ರ ಪ್ರಸಾದ್, ಜಿ.ಡಿ. ಬಿರ್ಲಾ, ಬಲರಾಜ್ ಸಾಹ್ನಿ, ಆನಂದರಾಗ ಪಿಳ್ಳೈ ಪ್ರಮುಖರು.

ಕರ್ನಾಟಕದಲ್ಲಿ ಡೈರಿ ಸಾಹಿತ್ಯ ಗಣನೀಯ ಸೇವೆ ಮಾಡಿದವರಲ್ಲಿ ಆರ್.ಕೆ. ನಾರಾಯಣ್, ವಿ. ಸೀತಾರಾಮಯ್ಯ, ಯಶವಂತ ಚಿತ್ತಾಲ, ಕೆ.ಆರ್. ಕಾರಂತ, ಎಚ್.ವಿ. ಶ್ರೀರಂಗರಾಜು ಪ್ರಮುಖರು.

ವಿಶ್ವವಿಖ್ಯಾತ ಇಂಜಿನಿಯರ್, ಆಡಳಿತಗಾರ, ಶತಾಯುಷಿ ಸರ್. ಎಂ. ವಿಶ್ವೇಶ್ವರಯ್ಯನವರು ಬರೆದ 'ಮೆಮೊಯರ್ಸ್ ಆಫ್ ಮೈ ವರ್ಕಿಂಗ್ ಲೈಫ್' (1951) ಮತ್ತು 'ಎ ಬ್ರೀಫ್ ಮೆಮೊಯರ್ ಅಫ್ ಮೈ ಕಂಪ್ಲೀಟ್ ವರ್ಕಿಂಗ್ ಲೈಫ್' (1959) ಉಲ್ಲೇಖನಾರ್ಹ ದಿನಚರಿಗಳು.

ಡೈರಿಯನ್ನು ಯಾರು ಬೇಕಾದರೂ ಬರೆಯಬಹುದು. ಬೇರೆ ಬೇರೆ ವೃತ್ತಿಗಳವರು ಬರೆದ ಡೈರಿಗಳಿಂದ ಆಸ್ತಿವಿಭಾಗದ ತಕರಾರುಗಳು ತೀರ್ಮಾನವಾಗಿವೆ; ಕಳ್ಳರು, ವಂಚಕರು ಸಿಕ್ಕಿಬಿದ್ದಿದ್ದಾರೆ; ಗುಟ್ಟಾಗಿ ಮಾಡಿದ ಹಣಕಾಸು ವ್ಯವಹಾರಗಳು ಬಯಲಾಗಿವೆ; ನಿಗೂಢ ಸಂಬಂಧಗಳು ಬಹಿರಂಗವಾಗಿವೆ; ರೋಗ ಲಕ್ಷಣಗಳು ತಿಳಿದುಬಂದಿವೆ; ದೇಶದ್ರೋಹಿಗಳು ಸೆರೆ ಸಿಕ್ಕಿದ್ದಾರೆ; ಮಕ್ಕಳ ವರ್ತನೆಗೆ ಕಾರಣಗಳು ತಿಳಿದುಬಂದಿವೆ. ಹೀಗೆ ಡೈರಿಗಳಿಂದ ನಾನಾ ಉಪಯೋಗಗಳಿವೆ.

ಡೈರಿ ಬರೆಯಲು ನಿಮ್ಮಲ್ಲಿ ವಿಶೇಷ ಗುಣಗಳೇನೂ ಇರಬೇಕಾಗಿಲ್ಲ. ಸಾಕಷ್ಟು ಸ್ಥಳಾವಕಾಶವಿರುವ ದುಬಾರಿಯಲ್ಲದ ಡೈರಿಯೊಂದನ್ನು ಕೊಂಡು ತಂದು ನಿಮ್ಮ ನೆನಪಿನಲ್ಲಿರಬೇಕಾದ ಜನ್ಮದಿನ, ಮರಣದಿನ, ದೂರವಾಣಿ ಸಂಖ್ಯೆ, ಅನಿರೀಕ್ಷಿತ ಮತ್ತು ಮಾಡಲು ಬಯಸುವ ಖರ್ಚುವೆಚ್ಚ, ದಿನದಿಂದ ದಿನಕ್ಕೆ ಮಾಡಿದ, ಮಾಡಬೇಕಾದ ಸಾಂಸಾರಿಕ ಮತ್ತು ಔದ್ಯೋಗಿಕ ಕೆಲಸಗಳು. ನೀವು ಓದಿದ ಪುಸ್ತಕ, ಪತ್ರಿಕೆಯಿಂದ, ನಿಮಗಿಷ್ಟವಾದ ವಿಷಯದ ಟಿಪ್ಪಣಿಯನ್ನು ಬರೆಯಿರಿ. ಡೈರಿ ಬರೆಯುವುದನ್ನು ರೂಢಿ ಮಾಡಿಕೊಂಡರೆ ನಿಮ್ಮ ಆತ್ಮವಿಶ್ವಾಸ ಹೆಚ್ಚುವುದು ಖಂಡಿತ.



'ದಿನಚರಿ ಬರೆಯಲು ಸಮಯವಿಲ್ಲ. ಅದರ ಬದಲಿಗೆ ಬೇಕಾದ್ದನ್ನು, ಕಂಪ್ಯೂಟರ್‌ನಲ್ಲಿ, ಡಿಜಿಟಲ್ ಡೈರಿಯಲ್ಲಿ, ಮೊಬೈಲ್ ಫೋನಿನಲ್ಲಿ ರೆಕಾರ್ಡ್ ಮಾಡ್ತೀನಿ' ಅನ್ನಬೇಡಿ. ನಿಮ್ಮ ಕೈ ಬರಹದಲ್ಲಿ ಬರೆದದ್ದು ನಿಮ್ಮ ಭಾವನೆಗಳಿಂದ ತುಂಬಿರುತ್ತದೆ. ನಿಮ್ಮ ಇಂದಿನ ಒತ್ತಡ, ತರಾತುರಿಯಿಂದ ಕೂಡಿದ ಬದುಕಿನಲ್ಲಿ, ನಿಮ್ಮ ಸೃಜನಶೀಲತೆ ಮತ್ತು ಸ್ವಂತಿಕೆಗೆ ಅವಕಾಶ ಕೊಡುವುದೇ ನಿಮ್ಮ ಡೈರಿ.

ಮುಂದಿನ ವರ್ಷದ ಮೊದಲ ದಿನಕ್ಕೆ ಮುಂಚೆಯೇ ಡೈರಿಯನ್ನು ತನ್ನಿ. ಪೂರ್ವ ಸಿದ್ಧತೆಯನ್ನೆಲ್ಲಾ ಮಾಡಿಕೊಂಡು ಬರೆಯಲು ಆರಂಭಿಸಿ. ■